**Tejas Networks Ltd.**
Regd. Office: Plot No. 25, 5th Floor
J.P. Software Park, Electronic City Phase 1
Hosur Road, Bengaluru 560 100, India
Tel : +91- 80- 4179 4600/700/800
Fax: +91- 80- 2852 0201

**October 21, 2025**

The Secretary
**National Stock Exchange of India Ltd**
Exchange Plaza, C/1, Block G, Bandra Kurla Complex, Bandra (East)
Mumbai – 400 051
**NSE Symbol: TEJASNET**

The Secretary
**BSE Limited**
P J Towers,
Dalal Street, Fort,
Mumbai – 400 001
**BSE Scrip Code: 540595**

Dear Sir/Madam,

**Re: Newspaper Publication for Notice of Postal Ballot**

In continuation to our letter dated October 20, 2025 regarding the Notice of Postal Ballot, please find enclosed the copies of the newspaper clippings in respect of the Notice of Postal Ballot, published in the newspapers “Financial Express” - English Language and “Vishwavani” - Kannada Language, on October 21, 2025.

This is for your kind information and record.

Yours sincerely,
**For Tejas Networks Limited**

ANANTHA MURTHY NARAYANA
Digitally signed by ANANTHA MURTHY NARAYANA
Date: 2025.10.21 11:59:52 +05'30'

**Anantha Murthy N**
**Company Secretary & Compliance Officer**

Encl: as above

# Tejas Networks Limited

**CIN: L72900KA2000PLC026980**

**Regd. Office:** J P Software Park, Plot No. 25, Sy. No. 13, 14, 17,18, Konnapana Agrahara Village, Begur Hobli, Bengaluru-560100, Karnataka **Phone:** +91-80-4179 4600 | **Fax:** +91-80-2852 0201
**Website:** www.tejasnetworks.com | **Email:** corporate@tejasnetworks.com

## NOTICE OF THE POSTAL BALLOT

Members of **Tejas Networks Limited (the "Company")** are hereby informed that pursuant to the provisions of Sections 108 and 110 of the Companies Act, 2013, read with Rule 20 and Rule 22 of the Companies (Management and Administration) Rules, 2014, (the Rules), Regulation 44 of Securities and Exchange Board of India (Listing Obligations & Disclosure Requirements) Regulations, 2025, Secretarial Standards on General Meetings issued by the Institute of Company Secretaries of India, each as amended and in accordance with various circulars issued by the Ministry of Corporate Affairs, for holding the general meeting / conducting postal ballot process through e-voting, the Company is seeking consent of its Members through Postal Ballot ("the Postal Ballot") only by way of remote e-voting ("e-voting") for the following resolution

| Type of Resolution | Ordinary Resolution |
|---|---|
| Particulars | Appointment of Dr. Randhir Thakur (DIN: 9154242) as a Director (non-executive, non-independent) of the company |

The Company has on Monday, October 20, 2025, completed dispatch of Postal Ballot Notice dated October 17, 2025, via email, to all those Members whose names appeared in the Register of Members / List of Beneficial Owners as received from Depositories (NSDL / CDSL) and whose email-addresses were available with the Company as on the Cut-off Date i.e., Friday, 17th October 2025. Accordingly, physical copy of the Notice along with the Postal Ballot forms and pre-paid business envelope have not been sent to the Members, for this Postal Ballot.

The Postal Ballot Notice is also available on the website of the Company at www.tejasnetworks.com, the relevant section of the website of BSE Limited at www.bseindia.com and National Stock Exchange of India Limited at www.nseindia.com on which the Equity Shares of the Company are listed and on the website of National Securities Depository Limited (NSDL) at www.evoting.nsdl.com.

Members of the Company whose names appeared in the Register of Members / List of Beneficial Owners as received from Depositories (i.e.) NSDL/CDSL as on the Cut-off Date i.e., Friday, October 17, 2025, shall be entitled to vote in relation to the resolution specified in the Postal Ballot Notice. The Company has appointed NSDL for facilitating remote-voting to enable the Members to cast their votes electronically. Members including those who are holding shares in physical form or who have not registered their e-mail addresses, can cast their notes by following the instructions mentioned in the Postal Ballot Notice dated October 17, 2025.

**The remote e-voting period commences on Friday, October 24, 2025 at 9.00 A.M. (IST) and ends on Saturday, November 22, 2025 at 5.00 P.M. (IST).** The remote e-voting shall not be allowed beyond the said date and time. The remote e-voting module shall be disabled for voting thereafter. Once the vote on a resolution is cast by the Member, the Member shall not be allowed to change it subsequently. The voting rights of the Members shall be in proportion to their share in the total paid-up equity share capital of the Company as on the Cut-off Date i.e., Friday, October 17, 2025.

The Board of Directors has appointed Mr. V Sreedharan (FCS No.2347; CP No.833) or in his absence, Mr. Pradeep B Kulkarni (FCS No.7260; CP No.7835) of M/s. V Sreedharan & Associates, Practicing Company Secretaries, as the Scrutinizer, to scrutinize the postal ballot process, in a fair and transparent manner.

The results of the Postal Ballot will be announced within 2 (two) working days from the conclusion of the e-voting period and the Results along with the Scrutinizer's report, will be displayed at the Registered Office of the Company, communicated to the Stock Exchanges and will also be uploaded on the Company website at www.tejasnetworks.com.

In case of any queries or issues or grievances pertaining to e-voting, Members may refer to Help/FAQ's section, available at www.evoting.nsdl.com or call on the Toll Free No.: 1800-1020-990/1800-224-430 or send a request at evoting@nsdl.co.in or contact Mr. Falguni Chakraborty, Deputy Manager, National Securities Depository Limited at FalguniC@nsdl.com or at Telephone No.: +91-22-2499 4545. Alternatively, Members may also write to the Company Secretary of the Company at corpoarte@tejasnetworks.com or contact at Telephone No.: +91-80-41876400.

**For and on behalf of the Board of Directors**
*Sd/-*
**Anantha Murthy N**
**Company Secretary & Compliance Officer**
**ICSI Membership No. A-17134**

**Place: Bengaluru**
**Date: October 20, 2025**






# TRUALT BIOENERGY LIMITED

*One of India's largest biofuels producers*

**Registered Address:** Survey No. 166, Kulali Cross, Jamkhandi Mudhol Road, Bagalkot, Karnataka, India - 587313
**Corporate Address:** Unit No. N-1501, 15th Floor, World Trade Centre, Brigade Gateway Campus, Rajajinagar, Bangalore – 560055
**Tel:** +91 80 2325 5000 **Email:** ir@trualtbioenergy.com **Website:** www.trualtbioenergy.com

**Corporate Identity Number:** U15400KA2021PLC145978

**EXTRACT OF THE CONSOLIDATED UNAUDITED FINANCIAL RESULTS OF TRUALT BIOENERGY LIMITED FOR THE QUARTER ENDED JUNE 30, 2025, PREPARED IN COMPLIANCE WITH THE INDIAN ACCOUNTING STANDARDS (IND AS).**

(All amounts are in ₹ lakhs, unless otherwise stated

| Particulars | Quarter Ended | | | Year Ended |
|---|---|---|---|---|
| | June 30, 2025 | March 31, 2025 | June 30, 2024 | March 31, 2025 |
| | Unaudited | Audited | Unaudited | Audited |
| **Revenue from operations** | **30,389.17** | **90,698.87** | **19,739.93** | **190,772.40** |
| Cost of goods sold | 21,974.94 | 59,767.85 | 14,117.30 | 127,162.06 |
| Profit before tax | 579.95 | 11,089.78 | (2,159.08) | 15,944.28 |
| Profit for the period | 472.52 | 11,169.36 | (2,151.37) | 14,663.85 |
| Total Comprehensive Income / (loss) for the period / year (comprising profit for the period/ year after tax and other comprehensive income / (expense) after tax) | 472.94 | 11,164.66 | (2,147.29) | 14,664.25 |
| **Profit / (Loss) attributable to** | | | | |
| - Owners of the company | 472.52 | 11,169.36 | (2,151.37) | 14,663.85 |
| - Non-Controlling Interest | - | - | - | - |
| **Total Comprehensive Income / (Expense) attributable to** | | | | |
| - Owners of the company | 472.94 | 11,164.66 | (2,147.29) | 14,664.25 |
| - Non-Controlling Interest | - | - | - | - |
| **Paid up Equity Share Capital (Face Value of ₹ 10 each)** | **7,063.16** | **7,063.16** | **7,063.16** | **7,063.16** |
| **Reserves (excluding Revaluation Reserve) as on March 31, 2025** | | | | **69836.74** |
| **Earnings Per Equity Share (Face Value of ₹ 10 each)*** | | | | |
| - Basic (₹) | 0.67 | 15.81 | (3.04) | 20.94 |
| - Diluted (₹) | 0.67 | 15.81 | (3.04) | 20.94 |

*EPS is not annualized for the quarters reported

Notes:
1. The Unaudited Consolidated Financial Results have been prepared in accordance with the recognition and measurement principles laid down in the Indian Accounting Standards ('Ind AS') 34, 'Interim Financial Reporting', as prescribed under section 133 of the Companies Act, 2013 ('the Act'), and other accounting principles generally accepted in India, and are in compliance with the presentation and disclosure requirements of Regulation 33 of the SEBI (Listing Obligations and Disclosure Requirements) Regulations, 2015 (as amended).
2. The Limited Review, as required under Regulation 33 of the SEBI (Listing Obligations and Disclosure Requirements) Regulations, 2015, has been carried out by the Statutory Auditors for the quarter ended June 30, 2025, and they have issued an unmodified limited review report on the same.
3. The Company's Ethanol business has historically been seasonal, in line with the harvesting of the surgarcane crop, with the period between April and October being the off season when there is little / no availability of raw material. Consequently, the quarterly results are not indicative of the annual performance. However, with the commissioning of grain-based capacities in the course of the current financial year, going forward, the business will no longer be seasonal.
4. The above is an extract of the detailed format of Quarterly Unaudited Financial Results filed with Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the Quarterly Unaudited Financial Results are available on the Stock Exchange websites, www.nseindia.com and www.bseindia.com, and on the Company's website (URL: https://www.trualtbioenergy.com/investor-relations). The same can be accessed by scanning the QR code provided below.

**Extract of the Standalone unaudited financial results of Trualt Bioenergy Limited for the quarter ended June 30, 2025, prepared in compliance with the Indian Accounting Standards (Ind AS).**

(All amounts are in ₹ lakhs, unless otherwise stated

| Particulars | Quarter Ended | | | Year Ended |
|---|---|---|---|---|
| | June 30, 2025 | March 31, 2025 | June 30, 2024 | March 31, 2025 |
| | Unaudited | Audited | Unaudited | Audited |
| Revenue from operations | 29,393.47 | 89,927.45 | 19,140.14 | 188,011.66 |
| Cost of goods sold | 21,894.47 | 59,608.05 | 14,274.75 | 126,797.20 |
| Profit / (loss) before tax | 13.19 | 10,913.60 | (2,545.70) | 15,215.11 |
| Profit / (loss) after tax | 2.57 | 11,022.81 | (2,509.39) | 14,061.53 |
| EBITDA | 3,489.18 | 15,092.02 | 855.77 | 29,719.38 |
| EBITDA % | 11.87% | 16.78% | 4.47% | 15.81% |

Date : October 19, 2025
Place : Bangalore

For and on behalf of the Board of Directors
Trualt Bioenergy Limited
Sd/-
Vijaykumar Murugesh Nirani
Managing Director
(DIN: 07413777)



# IMAGINE MARKETING LIMITED

**CIN:** U52300MH2013PLC249758

**Registered Office & Corporate Office:** Unit No. 204 & 205, 2nd floor in Wing-"D" & Wing-"E", Corporate Avenue, Andheri Ghatkopar Link Road, Andheri (East), Mumbai - 400093, Maharashtra, India
**Tel:** +91-22-62102400; **Website:** www.boat-lifestyle.com; **Email:** iml.secretarial@imaginemarketingindia.com

## POSTAL BALLOT NOTICE

**NOTICE** is hereby given to the Shareholders **("Members")** of Imagine Marketing Limited (the **"Company"**) that pursuant to the provisions of Sections 108, 110 and other applicable provisions, if any, of the Companies Act, 2013 (the **"Companies Act"**), read with Rules 20 and 22 of the Companies (Management and Administration) Rules, 2014, and General Circular No. 14/2020 dated April 08, 2020, 17/2020 dated April 13, 2020 read with other relevant circulars, including General Circular No. 09/2023 dated September 25, 2023, 09/2024 dated September 19, 2024 and 03/2025 dated September 22, 2025 issued by the Ministry of Corporate Affairs, Government of India (hereinafter collectively referred to as the **"MCA Circulars"**), Secretarial Standard on General Meetings (**"SS-2"**) issued by the Institute of Company Secretaries of India, including any statutory amendment(s), modification(s), variation(s) or re-enactment(s) thereof, for the time being in force, and any other applicable laws, rules, guidelines, notifications, circulars and regulations, if any, the Company seeks approval of the Members for the special businesses by way of special resolutions as set out in the Postal Ballot Notice dated September 29, 2025 alongwith the explanatory statement (the **"Notice"**) by way of electronics means (i.e. **"Remote e-Voting"**) only.

In accordance with the MCA Circulars, the Company has completed the dispatch of Notice on Monday, October 20, 2025 in electronic mode to those Members whose names appeared in the Register of Members / List of Beneficial Owners as on Friday, October 17, 2025 (**"Cut-off Date"**), received from the National Securities Depository Limited (**"NSDL"**) and the Central Depository Services (India) Limited (**"CDSL"**) (collectively referred to as **"Depositories"**) and whose e-mail address is registered with the Company / MUFG Intime India Private Limited (**"MUFG"**), Registrar and Transfer Agent (**"RTA"**) / Depositories / Depository Participants.

In compliance with MCA Circulars, the physical copy of the Notice along with postal ballot form and pre-paid business reply envelope will not be sent to the Members. Accordingly, the communication of assent or dissent of the Members eligible to vote in respect of the aforesaid resolutions is restricted only to Remote e-Voting i.e. by casting their votes electronically instead of submitting postal ballot forms.

In light of the MCA Circulars, Members who have not registered their e-mail address and in consequence could not receive the Postal Ballot Notice may temporarily get their e-mail address registered with the Company's RTA, M/s. MUFG Intime India Private Limited (Formerly known as 'Link Intime India Private Limited'), by clicking the link: https://web.in.mpms.mufg.com/EmailReg/Email_Register.html. Post successful registration of the e-mail, the Member would get soft copy of the Notice and the procedure for Remote e-Voting along with the User ID and Password to enable Remote e-Voting for this Postal Ballot. In case of any queries, member may write to rnt.helpdesk@in.mpms.mufg.com. The procedure for permanent registration of email address with the depository participant and the procedure for Remote e-Voting is provided in the Notice.

The Company has engaged the services of (**"NSDL"**) to provide Remote e-Voting facility to enable the Members to cast their votes electronically. The detailed procedure for Remote e-Voting is given in the Notice. The Remote e-Voting period facility is available during the following period:

| | |
|---|---|
| Commencement of Remote e-Voting | From 09:00 A.M. (IST) on Tuesday, October 21, 2025 |
| End of Remote e-Voting | Till 05:00 P.M. (IST) on Wednesday, November 19, 2025 |

The Remote e-Voting shall thereafter be disabled once the vote on resolutions is cast by the Member, the Member will not be able to change it subsequently. The resolutions, if approved by the requisite majority of Members by means of Postal Ballot, shall be deemed to have been passed on the last date of Remote e-Voting i.e. November 19, 2025.

Detailed instructions for Remote e-Voting are provided in the Notice. The Company has issued different classes of preference shares besides equity shares and each class of preference shares is entitled to voting rights at all meetings of the equity shareholders on as if converted basis, i.e. fully diluted basis. Accordingly, the voting right of holders of equity shares and holders of each class of preference shares shall be reckoned in proportion to the share of the paid-up equity share capital of the Company and paid-up preference share capital of the Company respectively, as on the Cut-off date i.e. Friday, October 17, 2025.

The Notice is also available on the Company's website at www.boat-lifestyle.com and on the website of National Securities Depository Limited (NSDL) at www.evoting.nsdl.com. A person who is not member as on date of cut-off date should treat this Notice of Postal Ballot for information purpose only.

The Board of Directors of the Company has appointed Mr. Mukesh Siroya, (Membership No. FCS 5682) Proprietor, M. Siroya and Company, Practicing Company Secretary, Mumbai, to act as the Scrutinizer for conducting the Remote e-voting process in a fair and transparent manner. The Scrutinizer will submit the report to the Chairman or any authorised person of the Company and the result of the Postal Ballot will be declared within two working days from the conclusion of the Remote e-Voting. The said results alongwith the Scrutinizer's Report will be displayed at the Registered Office of the Company and will also be uploaded on the Company's website www.boat-lifestyle.com and on the website of National Securities Depository Limited (NSDL) at www.evoting.nsdl.com.

In case of any query or issues regarding Remote e-Voting, Members may kindly refer to the Frequently Asked Questions (**"FAQs"**) for Shareholders and e-voting manual for Shareholders available at the download section of www.evoting.nsdl.com or call on 022 - 4886 7000 or contact Ms. Pallavi Mhatre, Senior Manager, NSDL, 4th Floor, 'A Wing' Trade World, Kamala Mills Compound, Senapati Bapat Marg, Lower Parel, Mumbai - 400013, at the designated email ID: evoting@nsdl.com.

By Order of the Board
For **Imagine Marketing Limited**
**Shreekant Jayram Sawant**
**Company Secretary & Compliance Officer**

Place: Mumbai
Date: October 20, 2025



HSBC

### THE HONGKONG AND SHANGHAI BANKING CORPORATION LIMITED

**Sale Notice (By Private Treaty) Rule 8(6) read with Rule 9(1) of Security Interest (Enforcement) Rules 2002) (Immovable Secured Assets/Movable Secured Assets)**

The undersigned as Authorized Officer of The Hongkong and Shanghai Banking Corporation Limited has taken over possession of the schedule property u/s 13(4) of the SARFAESI Act. Public at large is informed that the secured property as mentioned in the Schedule is available for sale through Private Treaty, as per the terms agreeable to the Bank for realisation of Bank's dues on "AS IS WHERE IS, AS IS WHAT IS AND WHATEVER THERE IS" basis.

**Standard terms & conditions for sale of property through Private Treaty are as under:**

1. Sale through Private Treaty will be on "AS IS WHERE IS, AS IS WHAT IS AND WHATEVER THERE IS" basis.
2. The purchaser has to deposit 10% of the offered amount along with application on or before 6.11.2025 which will be adjusted against 25% of the deposit to be made as per clause (3) below.
3. The purchaser will be required to deposit 25% of the sale consideration on the next working day of receipt of Bank's acceptance of offer for purchase of property and the remaining amount within 15 days thereafter.
4. Failure to remit the amount as required under clause (3) above, will cause forfeiture of amount already paid including 10% of the amount paid along with application.
5. In case of non-acceptance of offer of purchase by the Bank, the amount of 10% paid along with the application will be refunded without any interest.
6. The property is being sold with all the existing and future encumbrances whether known or unknown to the Bank. The Authorized Officer/Secured Creditor shall not be responsible in any way for any third-party claims/rights/dues.
7. The purchaser should conduct due diligence on all aspects related to the property (under sale through private treaty) to his/her/their satisfaction. The purchaser shall not be entitled to make any claim against the Authorized Officer/Secured Creditor in this regard at a later date.
8. The Bank reserves the right to reject any offer of purchase without assigning any reason.
9. In case of more than one offer, the Bank will accept the highest offer.
10. The interested parties may contact the Authorized Officer for further details/clarifications and for submitting their application on or before 6.11.2025.
11. The purchaser has to bear all stamp duty, registration fee, and other expenses, taxes, duties in respect of purchase of the property.
12. Sale shall be in accordance with the provisions of SARFAESI Act/Rules.

| Name of the Borrower/Guarantor/Mortgagors | Description of Immovable Property | Reserve Price (below which the (Rs.) property will not be sold) | Ernest Money Deposit (EMD) (Rs.) |
|---|---|---|---|
| 1. Janatha Freight Associated (Borrower).<br>2. Mr. Nagaraja (Mortgagor & Guarantor)<br>3. Mr. Manjunath S. (Mortgagor & Guarantor)<br>4. Mrs. Chandrakala (Mortgagor & Guarantor)<br>5. Mr. Sameera Simha S. (Proprietor, Mortgagor & Guarantor) | Site No. 469, BBMP Khatha No. 30, PID No. 52-53-30, Kanishka Maharaja Road, Sunkenahalli Extension, Gavipura, Bangalore 560019, admeasuring 710 sq. ft. | 86,28,600 | 8,62,860 |

\# Below which the property will not be sold and minimum amount to be deposited with the application will be 10% of the offered amount

**DATE: 21/10/2025**
**PLACE : Bangalore**

Sd/-
Authorised Officer,
The Hongkong and Shanghai Banking Corporation Limited,

## ಸಮಾಚಾರ ಸಣ್ಣದಲ್ಲ

### ಜನರಿಲ್ಲದೇ ಬಸ್ ನಿಲ್ದಾಣ ಬಿಕೋ

**ಬೆಂಗಳೂರು:** ದೀಪಾವಳಿ ಹಿನ್ನೆಲೆ ಬೆಂಗಳೂರಿನಲ್ಲಿದ್ದ ನಿವಾಸಿಗಳು ತಮ್ಮ ಊರುಗಳಿಗೆ ಹಿಂತಿರುಗಿದ ಹಿನ್ನೆಲೆ ಕಳೆದೆರಡು ದಿನಗಳಿಂದ ತುಂಬಿ ತುಳುಕುತ್ತಿದ್ದ ಕೆಂಪೇಗೌಡ ಬಸ್ ನಿಲ್ದಾಣ ಹಾಗೂ ಬಿಎಂಟಿಸಿ ಬಸ್ ನಿಲ್ದಾಣಗಳು ಸಂಪೂರ್ಣವಾಗಿ ಖಾಲಿ ಹೊಡೆಯುತ್ತಿದೆ. ಶುಕ್ರವಾರ, ಶನಿವಾರ, ಭಾನುವಾರವೇ ಹೆಚ್ಚಿನ ಸಂಖ್ಯೆಯಲ್ಲಿ ಜನರು ತಮ ತಮ ಊರುಗಳು, ಪ್ರವಾಸಿತಾಣ ಹಾಗೂ ದೇವಾಲಯಗಳಿಗೆ ತೆರಳಿದ್ದು, ಕಳೆದ ನಾಲ್ಕು ದಿನಗಳಿಂದ ಬಹುತೇಕ ಬಸ್‌ಗಳು ರಶ್ ಆಗಿದ್ದು, ಸೋಮವಾರ ನಗರದಲ್ಲಿ ಪ್ರಯಾಣಿಕರ ಸಂಖ್ಯೆ ಇಳಿಮುಖವಾಗಿದ್ದು, ಹಲವು ದಿನಗಳಿಂದ ಬೆಂಗಳೂರಿನಿಂದ ಹಾಸನಾಂಬ ದರ್ಶನಕ್ಕೆ ತೆರಳುವವರ ಸಂಖ್ಯೆಯು ಸಹ ಜೋರಾಗಿದ್ದು, ಈಗ ಅವರೂ ಇಲ್ಲದೆ ನಿಲ್ದಾಣಗಳು ಖಾಲಿ ಹೊಡೆಯುತ್ತಿದೆ. ಈ ಬಾರಿ ಬುಧವಾರ ದೀಪಾವಳಿ ಹಬ್ಬ ಬಂದಿದ್ದು, ಸಾಲು ಸಾಲು ರಜೆ ಹಿನ್ನೆಲೆ ಶುಕ್ರವಾರ ರಾತ್ರಿಯಿಂದಲೇ ಊರುಗಳಿಗೆ ತೆರಳಿದ್ದಾರೆ. ಇನ್ನು ಕೆಲವರು ನರಕ ಚತುರ್ದಶಿ ಹಬ್ಬವನ್ನು ಮುಗಿಸಿಕೊಂಡು ಅವರು ಕೂಡ ಊರುಗಳಿಗೆ ತೆರಳಿದ್ದು, ರಸ್ತೆಗಳು ಖಾಲಿ ಖಾಲಿಯಾಗಿದ್ದವು. ಸದಾ ಜನರಿಂದ ಗಿಜಿಗುಡುತ್ತಿದ್ದ ಮೆಜೆಸ್ಟಿಕ್, ಮೈಸೂರು ರಸ್ತೆ ಸ್ಯಾಟಲೈಟ್ ಬಸ್ ನಿಲ್ದಾಣ, ತುಮಕೂರು ರಸ್ತೆ, ಬಳ್ಳಾರಿ ರಸ್ತೆಯಲ್ಲಿ ಸೋಮವಾರ ವಾಹನಗಳ ಸಂಚಾರ ವಿರಳವಾಗಿತ್ತು.

### ಗಣತಿದಾರರಲ್ಲಿ ನಿರಾಸಕ್ತಿ

**ಬೆಂಗಳೂರು:** ನಗರದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಭಾಗವಹಿಸಲು ಶೇ.15ಕ್ಕಿಂತ ಅಧಿಕ ಮನೆಗಳು ನಿರಾಕರಿಸುತ್ತಿರುವುದರಿಂದ ಗಣತಿದಾರರಿಗೆ ಸಮೀಕ್ಷೆಯ ಕುರಿತು ನಿರಾಸಕ್ತಿ ಮೂಡಿದೆ. ಬನಶಂಕರಿಯಲ್ಲಿರುವ 30 ಫ್ಲಾಟ್‌ನ ಸಮುಚ್ಛಯದಲ್ಲಿ ಕೇವಲ ಎರಡು ಮನೆಯವರು ಮಾತ್ರ ಸಹಕರಿಸಿದ್ದಾರೆ. ಇದು ಕೇವಲ ಒಂದು ಭಾಗದಲ್ಲಿ ಕೇವಲ ಇಬ್ಬರು ಮಾತ್ರ ಸಹಕರಿಸಿದ್ದು, ಕೇವಲ ಒಂದು ಘಟನೆಯಲ್ಲ ಇದು ನಗರದಾದ್ಯಂತ ನಡೆಯುತ್ತಿರುವ ಒಂದು ಮಾದರಿಯಾಗಿದೆ. ನಾವು ಕೆಲವು ಮನೆಗಳಿಗೆ ನಾಲ್ಕೈದು ಬಾರಿ ಭೇಟಿ ನೀಡಿದ್ದೇವೆ. ಅವರು ಬಾಗಿಲು ತೆರೆಯುವುದಿಲ್ಲ. ಕೆಲವರು ಅವಮಾನ ವ್ಯಕ್ತ ಪಡಿಸುತ್ತಾರೆ. ಆದರೆ ನಾವು ನಮ್ಮ ಕೆಲಸವನ್ನು ಮಾತ್ರ ಮಾಡುತ್ತಿದ್ದೇವೆ ಎಂದು ದಣಿದ ಗಣತಿದಾರರು ಹೇಳಿದರು. ಕೆಲವು ಗಣತಿದಾರರ ವಿರುದ್ಧ ಜನರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ರಾಜ್ಯದ ಹೊರಗಿನಿಂದ ಕರ್ನಾಟಕದಲ್ಲಿ ನೆಲೆಸಿರುವವರಿಂದ, ರಾಜ್ಯದ ಅಭಿವೃದ್ಧಿಯಲ್ಲಿ ಯಾವುದೇ ಸ್ಪಷ್ಟ ಪಾಲು ಇಲ್ಲ. ಹೀಗಾಗಿ ನಿಮ್ಮ ಸರಕಾರಕ್ಕೆ ಕೆಲಸವಿಲ್ಲ, ಮತ್ತು ನಿಮಗೂ ಕೆಲಸವಿಲ್ಲ ಅದಕ್ಕಾಗಿಯೇ ನೀವು ನಮಗೆ ತೊಂದರೆ ನೀಡುತ್ತಿದ್ದೀರಿ ಎಂದು ಒಬ್ಬ ವ್ಯಕ್ತಿ ಗಣತಿದಾರರ ಮೇಲೆ ಗುಡುಗಿದ್ದಾರೆ ಎಂದು ವರದಿಯಾಗಿದೆ. ಬೆಂಗಳೂರಿನಲ್ಲಿ ಶೇ.40 ಕ್ಕಿಂತ ಕಡಿಮೆ ಕೆಲಸ ಪೂರ್ಣಗೊಂಡಿರುವುದರಿಂದ, ಅಕ್ಟೋಬರ್ 24 ರಿಂದ 31 ರವರೆಗೆ ಗಡುವನ್ನು ವಿಸ್ತರಿಸಲಾಗಿದೆ.

ಕಿರುಕುಳ ಎಂದು 28 ಪುಟಗಳ ಡೆತ್‌ನೋಟ್ ಬರೆದಿಟ್ಟು ಓಲಾ ಕಂಪನಿ ನೌಕರ ಆತ್ಮಹತ್ಯೆ | ಮೃತನ ಕಟುಂಬಸ್ಥರಿಗೆ ಅಸ್ಪಷ್ಟ ಮಾಹಿತಿ

# ಓಲಾ ಸಿಇಒ, ಹಿರಿಯ ಅಧಿಕಾರಿ ವಿರುದ್ಧ ಎಫ್‌ಐಆರ್

**ಬೆಂಗಳೂರು:** ಓಲಾ ಕಂಪನಿ ನೌಕರ ಅನುಮಾನಾಸ್ಪದ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ಇದೀಗ ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆಯಲ್ಲಿ ಕಂಪನಿ ಸಿಇಒ ಹಾಗೂ ಹಿರಿಯ ಅಧಿಕಾರಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಸಿಇಒ ಭವೇಶ್, ಹಿರಿಯ ಅಧಿಕಾರಿ ಸುಬ್ರತ್ ಕುಮಾರ್ ದಾಸ್ ವಿರುದ್ಧ ದೂರು ದಾಖಲಾಗಿದೆ. ಓಲಾ ಎಲೆಕ್ಟ್ರಿಕ್ ಕಂಪನಿಯ ಹೋಮೋಲೋಗೇಷನ್ ಎಂಜಿನಿಯರಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಕೆ.ಅರವಿಂದ್ ಅವರು ಚಿಕ್ಕಲ್ಲಸಂದ್ರ, ಮಂಜುನಾಥ ನಗರದ ನಿವಾಸಿ ಸೆ.28ರಂದು 11.30 ರಿಂದ 12.45ರ ನಡುವೆ ಆತಹತ್ಯೆ ಮಾಡಿಕೊಂಡಿದ್ದರು. ಅಂದು ಪೊಲೀಸರು ಯುಡಿಆರ್ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದರು. ಈ ನಡುವೆ ಅರವಿಂದ್ ಅವರ ಖಾತೆಗೆ ಕಂಪನಿಯಿಂದ 17.46 ಲಕ್ಷ ಹಣ ಜಮೆಯಾಗಿರುವುದನ್ನು ಗಮನಿಸಿ ಕುಟುಂಬದವರು ಕಂಪನಿಯವರನ್ನು ಪ್ರಶ್ನಿಸಿದಾಗ, ಕಂಪನಿಯ ಎಚ್‌ಆರ್ ಸೇರಿದಂತೆ ಕೆಲ ಸಿಬ್ಬಂದಿ ಅಸ್ಪಷ್ಟ ಮಾಹಿತಿ ನೀಡಿದ್ದಾರೆ.

ಸಿಬ್ಬಂದಿಯ ವರ್ತನೆಯಿಂದ ಅನುಮಾನಗೊಂಡ ಕುಟುಂಬದವರು ಮನೆಯನ್ನು ಸಂಪೂರ್ಣವಾಗಿ ಪರಿಶೀಲಿಸಿದಾಗ ಸುಮಾರು 28 ಪುಟಗಳ ಡೆತ್‌ನೋಟ್ ಪತ್ತೆಯಾಗಿದೆ. ಡೆತ್‌ನೋಟ್‌ನಲ್ಲಿ ಕೆಲಸದ ವಿಚಾರವಾಗಿ ಕಂಪನಿಯ ಹಿರಿಯ ಅಧಿಕಾರಿ ಸುಬ್ರತ್‌ಕುಮಾರ್, ಸಿಇಒ ಭವೇಶ್ ಅಗರ್ವಾಲ್ ಇವರಿಬ್ಬರೂ ತೀವ್ರ ಒತ್ತಡ ನೀಡುತ್ತಿದ್ದಾರೆ.





ನನಗೆ ಭತ್ಯೆ ಮತ್ತು ವೇತನ ನೀಡದೇ ಕಿರುಕುಳ ನೀಡುತ್ತಿರುವುದರಿಂದ ಆತಹತ್ಯೆ ಮಾಡಿಕೊಳ್ಳು ತ್ತಿದ್ದೇನೆಂದು ಡೆತ್‌ನೋಟ್‌ನಲ್ಲಿ ಉಲ್ಲೇಖಿಸಿರುವುದು ಕಂಡು ಬಂದಿದೆ. ಡೆತ್ ನೋಟ್ ಆಧಾರದಲ್ಲಿ ಇದೀಗ ಅರವಿಂದ್ ಕುಟುಂಬ ದವರು ಪೊಲೀಸರಿಗೆ ದೂರು ನೀಡಿದ್ದು, ಇದೀಗ ಪೊಲೀಸರು ಕಂಪನಿಯ ಸಿಇಒ ಹಾಗೂ ಹಿರಿಯ ಅಧಿಕಾರಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

### ದೂರಿನಲ್ಲಿ ಏನಿದೆ?

**ಅರವಿಂದ್ ಅವರು ಕೋರಮಂಗಲದಲ್ಲಿ ಇರುವ ಓಲಾ ಎಲೆಕ್ಟ್ರಿಕ್ ಕಂಪನಿಯ ಹೋಮೊಲೋಗೇಷನ್ ಎಂಜಿನಿಯರಿಂಗ್ ವಿಭಾಗದಲ್ಲಿ 2022ರಿಂದ ಕೆಲಸ ಮಾಡುತ್ತಿದ್ದರು. ಚಿಕ್ಕಲ್ಲಸಂದ್ರದ ಮಂಜುನಾಥ್ ನಗರದ ಅಪಾರ್ಟ್‌ಮೆಂಟ್‌ನಲ್ಲಿ ಅವರು ಆತ್ಮಹತ್ಯೆ ಮಾಡಿಕೊಂಡಿದ್ದರು. ಅರವಿಂದ್ ಬರೆದಿಟ್ಟ ಮರಣಪತ್ರವು ಅವರ ಕೊಠಡಿಯಲ್ಲಿ ದೊರೆತಿದೆ. ಅದರಲ್ಲಿ ಕೆಲವು ಅಂಶಗಳನ್ನು ಉಲ್ಲೇಖಿಸಿದ್ದಾರೆ ಎಂದು ದೂರು ನೀಡಲಾಗಿದೆ. ನನ್ನ ತಮ್ಮನ ಸಾವಿನ ನಂತರ ಅಂದರೆ ಸೆ.30ರಂದು ಬ್ಯಾಂಕ್ ಖಾತೆಗೆ ಕಂಪನಿಯರು 17.46 ಲಕ್ಷ ವರ್ಗಾವಣೆ ಮಾಡಿದ್ದರು. ಅದರ ಬಗ್ಗೆ ಅನುಮಾನ ಬಂದಿತ್ತು. ಈ ಸಂಬಂಧ ಓಲಾ ಕಂಪನಿಯ ಹಿರಿಯ ಅಧಿಕಾರಿ ಸುಬ್ರತ್ ಕುಮಾರ್ ದಾಸ್ ಅವರನ್ನು ವಿಚಾರಿಸಲಾಯಿತು. ಅದಾದ ಮೇಲೆ ಕಂಪನಿಯ ಪ್ರತಿನಿಧಿಗಳಾದ ಕೃತೇಶ್ ದೇಸಾಯಿ, ಪರಮೇಶ್, ರೋಷನ್ ಅವರು ಮನೆಗೆ ಬಂದು ಅರವಿಂದ್ ಅವರ ಖಾತೆಗೆ ವರ್ಗಾವಣೆ ಮಾಡಿದ್ದ ಹಣದ ಬಗ್ಗೆ ಅಸ್ಪಷ್ಟ ಮಾಹಿತಿ ನೀಡಿ ಕಂಪನಿಯವರ ತಪ್ಪುಗಳನ್ನು ಮರೆಮಾಚಿದಂತೆ ಕಂಡುಬಂದಿತ್ತು. ಬಳಿಕ ಮರಣಪತ್ರವನ್ನು ಪರಿಶೀಲಿಸಿದಾಗ ಕಂಪನಿಯ ಹೆಡ್ ಆಫ್ ಹೋಮೊಲೇಗೇಷನ್ ಎಂಜಿನಿಯರ್ ಆಗಿರುವ ಸುಬ್ರತ್ ಕುಮಾರ್ ದಾಸ್ ಹಾಗೂ ಕಂಪನಿಯ ಮಾಲೀಕರಾದ ಭವೇಶ್ ಅಗರ್ವಾಲ್ ಅವರು ಒತ್ತಡ ಹೇರಿದ್ದರು. ಅಲ್ಲದೇ ವೇತನ, ಭತ್ಯೆ ನೀಡದೇ ಕಿರುಕುಳ ನೀಡಿದ್ದರು. ಅದರಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂಬುದಾಗಿ ಆ ಪತ್ರದಲ್ಲಿ ಅರವಿಂದ ಬರೆದಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.**

## ರೌಡಿಗಳ ಪುಂಡಾಟ: ಮೂವರ ಸೆರೆ



**ಬೆಂಗಳೂರು:** ಹೆಣ್ಣೂರು ಪೊಲೀಸ್ ಠಾಣಾ ವ್ಯಾಪ್ತಿಯ ದೊಡ್ಡರಾಮಣ್ಣ ಮತ್ತು ಚಿಕ್ಕಣ್ಣ ಬಡಾವಣೆ ಮುಖ್ಯ ರಸ್ತೆಯಲ್ಲಿ ಭಾನುವಾರ ರಾತ್ರಿ ಮಾರಕಾಸ್ತ್ರಗಳನ್ನು ಸಾರ್ವಜನಿಕರತ್ತ ಬೀಸಿ, ಹಲ್ಲೆ ನಡೆಸಿ ಪುಂಡಾಟ ಮೆರೆದಿದ್ದ ಮೂವರು ಆರೋಪಿಗಳನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ. ಅಮೀನ್ ಷರೀಫ್ (24), ಸೈಯದ್ ಅರ್ಬಾಜ್ (20), ಸೈಯದ್ ಖಾದರ್ (21) ಬಂಧಿತರು. ಬಂಧಿತರಿಂದ ಮಾರಕಾಸ್ತ್ರ ಜಪ್ತಿ ಮಾಡಲಾಗಿದೆ. ಬಡಾವಣೆ ನಿವಾಸಿ ಕಿರಣ್ ಎಂಬುವವರು ನೀಡಿದ ದೂರು ಆಧರಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊ ದೃಶ್ಯಾವಳಿ ಆಧರಿಸಿ, ಮೂವರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ. ಇಬ್ಬರು ತಲೆಮರೆಸಿಕೊಂಡಿದ್ದು, ಅವರ ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಮಾರಕಾಸ್ತ್ರ ಹಿಡಿದು ಪುಂಡಾಟ ನಡೆಸುತ್ತಿರುವ ಬಗ್ಗೆ ಸ್ಥಳೀಯರೇ ಪೊಲೀಸರಿಗೆ ಮಾಹಿತಿ ನೀಡಿದ್ದರು. ಆ ಮಾಹಿತಿ ಆಧರಿಸಿ ಸ್ಥಳಕ್ಕೆ ಪೊಲೀಸರು ತೆರಳುವಷ್ಟರಲ್ಲಿ ಇಬ್ಬರು ಪರಾರಿ ಆಗಿದ್ದರು. ಉಳಿದ ಮೂವರನ್ನು ಸ್ಥಳೀಯರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ ಎಂದು ಗೊತ್ತಾಗಿದೆ. ಹೆಣ್ಣೂರು ಭಾಗದಲ್ಲಿ ಡ್ರಗ್ಸ್ ತೆಗೆದುಕೊಂಡು ಹಾಗೂ ಮದ್ಯಪಾನ ಮಾಡಿ ರೌಡಿಗಳು ರಾತ್ರಿ ವೇಳೆ ಪುಂಡಾಟ ನಡೆಸುತ್ತಿದ್ದಾರೆ. ಕಳೆದ ವರ್ಷ ರಸ್ತೆ ಬದಿಯಲ್ಲಿ ನಿಲುಗಡೆ ಮಾಡಿದ್ದ ವಾಹನಗಳಿಗೆ ರೌಡಿಗಳು ಬೆಂಕಿಹಚ್ಚಿ ಪರಾರಿ ಆಗಿದ್ದರು. ಭಾನುವಾರ ರಾತ್ರಿ ಪೊಲೀಸರ ಭಯವಿಲ್ಲದೇ ಮಾರಕಾಸ್ತ್ರ ಹಿಡಿದು ಓಡಾಟ ನಡೆಸಿದ್ದಾರೆ ಎಂದು ಸ್ಥಳೀಯರು ದೂರಿದ್ದಾರೆ.

## ಸ್ಕೂಲ್‌ಗೆ ಬಂದಿಲ್ಲವೆಂದು ಶಿಕ್ಷಕಿ ಥಳಿತ

**ಬೆಂಗಳೂರು:** ಸ್ಕೂಲ್‌ಗೆ ಬಂದಿಲ್ಲ ಎಂದು ವಿದ್ಯಾರ್ಥಿಗೆ ಶಾಲಾ ಪ್ರಾಂಶುಪಾಲರು, ಶಿಕ್ಷಕರು ಹಿಗ್ಗಾಮುಗ್ಗಾ ಥಳಿಸಿರುವ ಆರೋಪ ಕೇಳಿಬಂದಿದೆ. 9ನೇ ತರಗತಿ ವಿದ್ಯಾರ್ಥಿಗೆ ಪ್ರಿನ್ಸಿಪಾಲ್ ರಾಕೇಶ್ ಕುಮಾರ್ ಮತ್ತು ಶಿಕ್ಷಕರು ಹಲ್ಲೆ ಮಾಡಿರುವ ಘಟನೆ ಬೆಂಗಳೂರಿನ ಸುಂಕದಕಟ್ಟೆ ಬಳಿಯ ಖಾಸಗಿ ಶಾಲೆಯಲ್ಲಿ ನಡೆದಿದೆ.

2 ದಿನ ಶಾಲೆಗೆ ಬರದಿದ್ದಕ್ಕೆ ವಿದ್ಯಾರ್ಥಿಗೆ ಹೊಯ್ಸಳ ನಗರದಲ್ಲಿರುವ ಸೇಂಟ್ ಮೆರೀಸ್ ಪಬ್ಲಿಕ್ ಸ್ಕೂಲ್‌ನ ಪ್ರಿನ್ಸಿಪಾಲ್, ಶಿಕ್ಷಕರು ಪಿವಿಸಿ ಪೈಪ್‌ನಿಂದ ತೀವ್ರವಾಗಿ ಥಳಿಸಿದ ಆರೋಪವಿದೆ. ಅಕ್ಟೋಬರ್ 14ರಂದು ನಡೆದ ಘಟನೆ, ತಡವಾಗಿ ಬೆಳಕಿಗೆ ಬಂದಿದೆ. ಪ್ರಿನ್ಸಿಪಾಲ್ ಹಾಗೂ ಟೀಚರ್, ಬಾಲಕನಿಗೆ ಬಾಸುಂಡೆ ಬರುವಂತೆ ಹೊಡೆದು, ಸ್ಕೂಲ್‌ನ ಡಾರ್ಕ್ ರೂಂನಲ್ಲಿಟ್ಟು ಕಿರುಕುಳ ನೀಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಶಾಲೆಯ ಸಿಬ್ಬಂದಿ ಹೊಡೆದ ಆಘಾತದಿಂದ ಬಾಲಕ ಇನ್ನೂ ಹೊರಬಂದಿಲ್ಲ. ಈ ಸಂಬಂಧ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ಆದರೂ ಕ್ರಮ ಕೈಗೊಳ್ಳಿಲ್ಲ ಎಂದು ವಿದ್ಯಾರ್ಥಿ ಪೋಷಕರ ಆರೋಪಿಸಿದ್ದಾರೆ

## ಜಿಟಿಮಾಲ್‌ನ 3ನೇ ಮಹಡಿಯಿಂದ ಜಿಗಿದು ವ್ಯಕ್ತಿ ಸಾವು

**ಬೆಂಗಳೂರು:** ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದ ವ್ಯಕ್ತಿಯೋರ್ವ ಮಾಗಡಿ ರಸ್ತೆಯಲ್ಲಿರುವ ಜಿಟಿ ಮಾಲ್‌ನ ಮೂರನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸೋಮವಾರ ಬೆಳಗ್ಗೆ ನಡೆದಿದೆ.

ಸಾಗರ್ (35) ಸಾವನ್ನಪ್ಪಿದ ವ್ಯಕ್ತಿ. ಕೆಎಚ್‌ಬಿ ಕಾಲೋನಿಯ ಪಾಪಯ್ಯ ಗಾರ್ಡನ್‌ನಲ್ಲಿ ವಾಸವಾಗಿದ್ದ. ಬೆಳಗ್ಗೆ 9.30ರ ಸುಮಾರಿಗೆ ಜಿಟಿ ಮಾಲ್‌ಗೆ ಬಂದ ಸಾಗರ್ ಮೂರನೇ ಮಹಡಿಯಿಂದ ಬಿದ್ದು ಸಾವನ್ನಪ್ಪಿದ್ದಾರೆ. ಸ್ಥಳಕ್ಕೆ ಕೆ.ಪಿ.ಅಗ್ರಹಾರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಿದ್ದಾರೆ. ಅವಿವಾಹಿತನಾಗಿದ್ದ ಸಾಗರ್ ತಂದೆ ನಿವೃತ್ತ ಬ್ಯಾಂಕ್ ಉದ್ಯೋಗಿಯಾಗಿದ್ದು, ತಾಯಿ ಗೃಹಿಣಿಯಾಗಿದ್ದರು. ಈತನಿಗೆ ಓರ್ವ ಸಹೋದರಿ ಇದ್ದಾರೆ. ಸಾಗರ್ ಖಾಸಗಿ ಕಾಲೇಜಿನಲ್ಲಿ ಎಂಜಿನಿಯರಿಂಗ್ ಓದಿ ಅನುತ್ತೀರ್ಣಗೊಂಡಿದ್ದರು. ಇದರಿಂದ ಜುಗುಪ್ಸೆ ಉಂಟಾಗಿ ಎಲ್ಲಿಯೂ ಕೆಲಸಕ್ಕೆ ಹೋಗುತ್ತಿರಲಿಲ್ಲ. ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದ ಸಾಗರ್, ಕಳೆದ 10 ವರ್ಷಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಸಾಗರ್ ಕಳೆದ ವರ್ಷ ಮೆಟ್ರೊ ರೈಲು ನಿಲ್ದಾಣವೊಂದರ ಟ್ರ್ಯಾಕ್‌ನಲ್ಲಿ ಬಿದ್ದು ಆತ್ಮಹತ್ಯೆಗೆ ಯತ್ನಿಸಿದ್ದ. ಇದನ್ನು ಕಂಡು ಮೆಟ್ರೋ ಸಿಬ್ಬಂದಿ ಕ್ಷಣಾರ್ಧದಲ್ಲಿ ಪವರ್ ಬಟನ್ ಆಫ್ ಮಾಡಿ ರಕ್ಷಿಸಿದ್ದರು. ಇದರಿಂದ ಎಚ್ಚೆತ್ತುಗೊಂಡ ಕುಟುಂಬಸ್ಥರು ಒಬ್ಬಂಟಿಯಾಗಿ ಹೊರಗೆ ಹೆಚ್ಚು ಓಡಾಡಲು ಬಿಡುತ್ತಿರಲಿಲ್ಲ. ಇತ್ತೀಚೆಗೆ ಈತನ ಆರೋಗ್ಯದಲ್ಲಿ ಕೊಂಚ ಚೇತರಿಕೆ ಕಂಡುಬಂದಿತ್ತು. ಹೀಗಾಗಿ, ಸೋಮವಾರ ಒಬ್ಬನೇ ಮನೆಯಿಂದ ಬಂದಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

## ಡಿ.9ರಿಂದ ಸೂಪರ್ ಕಂಪ್ಯೂಟಿಂಗ್ ಸಮಾವೇಶ

**ಬೆಂಗಳೂರು:** ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ (ಸಿಡಾಕ್) ವತಿಯಿಂದ ಡಿ.9ರಿಂದ 13ರವರೆಗೆ ಇಲ್ಲಿನ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸೂಪರ್ ಕಂಪ್ಯೂಟಿಂಗ್ ಇಂಡಿಯಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಕಾರ್ಯದರ್ಶಿ ಎಸ್. ಕೃಷ್ಣನ್ ಹೇಳಿದರು. ಸೂಪರ್ ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ಭಾರತವು ಪ್ರಬಲವಾಗುತ್ತಿದ್ದು, ತನ್ನದೇ ಆದ ಸೂ ಪರ್ ಕಂಪ್ಯೂಟರ್‌ಗಳನ್ನು ಅಭಿವೃದ್ಧಿಪಡಿಸುತ್ತಿದೆ ಎಂದು ಎಸ್. ಕೃಷ್ಣನ್ ಹೇಳಿದರು.

ಮಕ್ಕಳು ಪಟಾಕಿ ಸಿಡಿಸುವಾಗ ದೊಡ್ಡವರು ಗಮನ ಹರಿಸಲು ಸಲಹೆ

# ಪಟಾಕಿ ಸಿಡಿತ; 11ಮಕ್ಕಳ ಕಣ್ಣಿಗೆ ಗಾಯ

**ಬೆಂಗಳೂರು:** ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಪಟಾಕಿ ಸಿಡಿಸುವಾಗ ಮೂರು ವರ್ಷದ ಮಗು ಸೇರಿದಂತೆ 11 ಮಕ್ಕಳು ಗಾಯಗೊಂಡಿದ್ದಾರೆ. ನಗರದ ಮಿಂಟೋ ಆಸ್ಪತ್ರೆಯಲ್ಲಿ ಇಬ್ಬರಿಗೆ, ಶೇಖರ್ ಕಣ್ಣಿನ ಆಸ್ಪತ್ರೆಯಲ್ಲಿ ಐವರು ಮಕ್ಕಳಿಗೆ ಹಾಗೂ ನಾರಾಯಣ ನೇತ್ರಾಲಯದಲ್ಲಿ ಒಬ್ಬ ಹಿರಿಯ ನಾಗರಿಕ ಸೇರಿಂತೆ ಒಟ್ಟು 11 ಜನರಿಗೆ ಚಿಕಿತ್ಸೆ ನೀಡಲಾಗಿದೆ. ಮನೆಯಲ್ಲಿ ಪಟಾಕಿ ಹಚ್ಚುವಾಗ ಮೂರು ವರ್ಷದ ಬಾಲಕನ ಎರಡೂ ಕಣ್ಣುಗಳಿಗೆ ಪಟಾಕಿ ಹೊಗೆಯ ಜತೆಗೆ ಸಣ್ಣ ಕಿಡಿಗಳು ತಾಗಿದ ಹಿನ್ನೆಲೆಯಲ್ಲಿ ನಾರಾಯಣ ನೇತ್ರಾಲಯದಲ್ಲಿ ಚಿಕಿತ್ಸೆಗೆ ನೀಡಲಾಗಿದೆ. ಕಣ್ಣುಗಳನ್ನು ತೊಳೆದು ಔಷಧಗಳನ್ನು ನೀಡಲಾಗಿದ್ದು, ಹೆಚ್ಚಿನ ಆರೈಕೆ ನೀಡಲಾಗುತ್ತಿದೆ ಎಂದು ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ. ಮಿಂಟೋ ಆಸ್ಪತ್ರೆಗೆ ಚಿಕಿತ್ಸೆ ಪಡೆದ



12 ವರ್ಷದ ಬಾಲಕನೋರ್ವ ಪಟಾಕಿ ಸಿಡಿಸುವಾಗ ಕಣ್ಣಿಗೆ ಕಿಡಿಯೊಂದು ತಗುಲಿ ಗಾಯಗೊಂಡಿದ್ದರೆ, 14 ವರ್ಷದ ಬಾಲಕನೋರ್ವನಿಗೆ ಪಟಾಕಿ ಸಿಡಿಸುತ್ತಿರುವುದನ್ನು ನೋಡುತ್ತಿರುವಾಗ ಕಿಡಿಯೊಂದು ತಗಲಿ ಗಾಯವಾಗಿದೆ.

''ಇಬ್ಬರನ್ನು ಮಿಂಟೋ ಆಸ್ಪತ್ರೆಯ ಹೊರ ರೋಗಿಗಳ ವಿಭಾಗದಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಇಬ್ಬರು ಮಕ್ಕಳಿಗೆ ಹೆಚ್ಚಿನ ಹಾನಿಯಾಗಿಲ್ಲ ಎಂದು ಮಿಂಟೋ ವೈದ್ಯರು'' ಮಾಹಿತಿ ನೀಡಿದ್ದಾರೆ. 12 ವರ್ಷದ ಬಾಲಕಿಯೊಬ್ಬಳ ಕಾರ್ನಿಯಾದ ಮೇಲೆ ಕಿಡಿಗಳು ಬಿದಿದ್ದು‌ಫಿ, ವೈದ್ಯರು ಈ ಕಣಗಳನ್ನು ಸುರಕ್ಷಿತವಾಗಿ ತೆಗೆದುಹಾಕಿದ್ದಾರೆ. ಸದ್ಯ, ಆಕೆಗೆ ಆ್ಯಂಟಿಬಯಾಟಿಕ್ ಮತ್ತು ಲೂಬ್ರಿಕೆಂಟ್‌ಗಳ (ತೇವಾಂಶ ನೀಡುವ ಹನಿಗಳು) ಮೂಲಕ ಚಿಕಿತ್ಸೆ ನೀಡಲಾಗುತ್ತಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಶೇಖರ್ ಕಣ್ಣಿನ ಆಸ್ಪತ್ರೆಯಲ್ಲಿ ದಾಖಲಾದ ಎಲ್ಲಾ ಐದು ಮಕ್ಕಳು 8 ರಿಂದ 12 ವರ್ಷದ ವಯೋಮಾನದವರಾಗಿದ್ದು, ಯಾರಿಗೂ ಗಂಭೀರ ಗಾಯಗಳಾಗಿಲ್ಲ. ಮಕ್ಕಳು ಪಟಾಕಿ ಸಿಡಿಸುವಾಗ ದೊಡ್ಡವರು ಗಮನ ಹರಿಸಬೇಕು. ಯಾವುದೇ ಗಾಯವಾದಲ್ಲಿ ತಡಮಾಡದೆ ಹತ್ತಿರದ ಕಣ್ಣಿನ ಆಸ್ಪತ್ರೆಗೆ ಭೇಟಿ ನೀಡಿ ಎಂದು ವೈದ್ಯರು ಸಲಹೆ ನೀಡಿದ್ದಾರೆ.

## ಪಟಾಕಿ ಮಳಿಗೆ ಮೇಲೆ ದಾಳಿ

**ಬೆಂಗಳೂರು:** ನಿಗದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಪಟಾಕಿ ದಾಸ್ತಾನು ಮಾಡಿಕೊಂಡಿದ್ದ ಮಳಿಗೆಗಳ ಮೇಲೆ ಪೊಲೀಸರು ದಾಳಿ ನಡೆಸಿ, ಮಳಿಗೆಯ ಮಾಲೀಕರ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ. ಕಾಟನ್‌ಪೇಟೆ, ಚಿಕ್ಕಪೇಟೆ, ಕೆಆರ್ ಮಾರುಕಟ್ಟೆ ಹಾಗೂ ಹೊಸೂರು ಭಾಗದಲ್ಲಿ ಪೊಲೀಸರು ಸೋಮವಾರ ಮಧ್ಯಾಹ್ನ ಕಾರ್ಯಾಚರಣೆ ನಡೆಸಿದರು. ಈ ವೇಳೆ ಪರವಾನಗಿ ಪಡೆದ ಪ್ರಮಾಣಕ್ಕಿಂತಲೂ ಹೆಚ್ಚಿನ ದಾಸ್ತಾನು ಮಾಡಿಕೊಂಡಿರುವುದು ಕಂಡುಬಂತು. ಹೆಚ್ಚುವರಿ ಪಟಾಕಿಯನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು ಎಂದು ಗೊತ್ತಾಗಿದೆ. ಹಸಿರು ಪಟಾಕಿ ಹೆಸರಿನಲ್ಲಿ ಸಾಂಪ್ರದಾಯಿಕ ಪಟಾಕಿಗಳ ಮಾರಾಟ ಮಾಡುತ್ತಿರುವುದು, ಪರವಾನಗಿ ಪಡೆಯದವರೂ ಪಟಾಕಿ ಮಾರಾಟ ನಡೆಸುತ್ತಿರುವುದು ಕಂಡುಬಂತು. ಅಂತಹವರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ. ಮಂಗಳವಾರ,ಬುಧವಾರ ಸಹ ವಿವಿಧೆಡೆ ಕಾರ್ಯಾಚರಣೆ ನಡೆಸಲಿದ್ದಾರೆ.

## ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್

TEJAS NETWORKS

ಕಾರ್ಪೋರೇಟ್ ಐಡೆಂಟಿಟಿ ನಂಬರ್: L72900KA2000PLC026980
ನೋಂದಾಯಿತ ಕಛೇರಿ: ಜೆ.ಪಿ. ಸಾಫ್ಟ್‌ವೇರ್ ಪಾರ್ಕ್, ಪ್ಲಾಟ್ ನಂ. 25, ಸರ್ವೇ ನಂ. 13, 14, 17, 18, ಕೋನಪ್ಪನ ಅಗ್ರಹಾರ ವಿಲೇಜ್, ಬೇಗೂರು ಹೋಬಳಿ, ಬೆಂಗಳೂರು–560 100, ಕರ್ನಾಟಕ
ದೂರವಾಣಿ: +91 80 4179 4600 | ಫ್ಯಾಕ್ಸ್: +91 80 2852 0201
ವೆಬ್‌ಸೈಟ್: www.tejasnetworks.com | ಇಮೇಲ್: corporate@tejasnetworks.com

### ಅಂಚೆ ಮತಪತ್ರ ಸೂಚನೆ

**ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್ ("ಕಂಪನಿ")** ಸದಸ್ಯರಿಗೆ ಕಂಪೆನಿಗಳ ಕಾಯ್ದೆ, 2013 ರ ಸೆಕ್ಷನ್ 108 ಮತ್ತು 110 ರ ನಿಬಂಧನೆಗಳ ಪ್ರಕಾರ, ಕಂಪೆನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014, (ನಿಯಮಗಳು)ರ ನಿಯಮ 20 ಮತ್ತು ನಿಯಮ 22ನ್ನು ಓದಿಕೊಂಡಂತೆ, ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಘೋಷಣೆಗಳ ಅವಶ್ಯಕತೆಗಳು) ನಿಯಮಗಳು, 2025ರ ನಿಯಮ 44, ಭಾರತೀಯ ಕಂಪೆನಿ ಕಾರ್ಯದರ್ಶಿಗಳ ಸಂಸ್ಥೆ ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಕಾರ್ಯದರ್ಶಿ ಮಾನದಂಡಗಳು, ಪ್ರತಿಯೊಂದನ್ನು ತಿದ್ದುಪಡಿ ಮಾಡಿದಂತೆ ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿದ ವಿವಿಧ ಸುತ್ತೋಲೆಗಳಿಗೆ ಅನುಗುಣವಾಗಿ (ವಿ–ಮತದಾನದ ಮೂಲಕ ಸಾಮಾನ್ಯ ಸಭೆಯನ್ನು ನಡೆಸಲು / ಅಂಚೆ ಮತಪತ್ರ ಪ್ರಕ್ರಿಯೆಯನ್ನು ನಡೆಸಲು), ಕಂಪೆನಿಯು ತನ್ನ ಸದಸ್ಯರ ಒಪ್ಪಿಗೆಯನ್ನು ಅಂಚೆ ಮತಪತ್ರದ ಮೂಲಕ ಮಾತ್ರ ಸದೂರ ವಿ–ಮತದಾನ ("ವಿ–ಮತದಾನ") ಪ್ರಕ್ರಿಯೆಯ ಮೂಲಕ ಈ ಕೆಳಗಿನ ಸಾಮಾನ್ಯ ನಿರ್ಣಯಕ್ಕಾಗಿ ಕಂಪೆನಿಯ ಸದಸ್ಯರ ಅನುಮೋದನೆಯನ್ನು ಕೋರಲಾಗಿದೆ.

| ನಿರ್ಣಯದ ವಿಧಾನ | ಸಾಮಾನ್ಯ ನಿರ್ಣಯ |
| --- | --- |
| ವಿವರಗಳು | ಕಂಪೆನಿಯ ನಿರ್ದೇಶಕರಾಗಿ (ಕಾರ್ಯನಿರ್ವಾಹಕೇತರ, ಸ್ವತಂತ್ರೇತರ) ಡಾ. ರಣಧೀರ್ ಠಾಕೂರ್ (DIN: 9154242) ಅವರನ್ನು ನೇಮಕ ಮಾಡಲು. |

ಕಂಪೆನಿಯು, ಅಕ್ಟೋಬರ್ 17, 2025 ರಂದು, ಡಿಪಾಸಿಟರಿಯಿಂದ (ಎನ್‌ಎಸ್‌ಡಿಎಲ್/ಸಿಡಿಎಸ್‌ಎಲ್) ಸ್ವೀಕರಿಸಿದ ಸದಸ್ಯರ ನೋಂದಣಿ / ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರುಗಳಿರುವ ಮತ್ತು ಕಟ್–ಆಫ್ ದಿನಾಂಕ, ಅಂದರೆ ಶುಕ್ರವಾರ, 17 ಅಕ್ಟೋಬರ್ 2025 ರಂದು ಕಂಪೆನಿಯಲ್ಲಿ ಲಭ್ಯವಿರುವ ಇಮೇಲ್ ವಿಳಾಸಗಳನ್ನು ಹೊಂದಿರುವ ಎಲ್ಲಾ ಸದಸ್ಯರಿಗೆ, ದಿನಾಂಕ ಅಕ್ಟೋಬರ್ 17, 2025ರ ಅಂಚೆ ಮತಪತ್ರದ ಸೂಚನೆಯನ್ನು ಇಮೇಲ್ ಮೂಲಕ ಸೋಮವಾರ, ಅಕ್ಟೋಬರ್ 20, 2025 ರಂದು ಕಳುಹಿಸಲಾಗಿದೆ. ಅದರಂತೆ, ಈ ಅಂಚೆ ಮತಪತ್ರದ ಉದ್ದೇಶಕ್ಕಾಗಿ ಸೂಚನೆಯ ಭೌತಿಕ ಪ್ರತಿಯೊಂದಿಗೆ, ಅಂಚೆ ಮತಪತ್ರ ನಮೂನೆಗಳು ಮತ್ತು ಪೂರ್ವ–ಪಾವತಿಸಿದ ವ್ಯವಹಾರ ಲಕೋಟೆಯನ್ನು ಸದಸ್ಯರಿಗೆ ಕಳುಹಿಸುವುದಿಲ್ಲ.

ಅಂಚೆ ಮತಪತ್ರದ ಸೂಚನೆಯು ಕಂಪೆನಿಯ ವೆಬ್‌ಸೈಟ್ www.tejasnetworks.comನಲ್ಲಿ ಲಭ್ಯವಿದ್ದು, ಕಂಪೆನಿಯ ಈಕ್ವಿಟಿ ಷೇರುಗಳನ್ನು ಪಟ್ಟಿ ಮಾಡಲಾದ ಬಿಎಸ್‌ಸಿ ಲಿಮಿಟೆಡ್‌ನ ವೆಬ್‌ಸೈಟ್: www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್: www.nseindia.com ನ ಸಂಬಂಧಿತ ವಿಭಾಗದಲ್ಲಿ ಹಾಗೂ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (NSDL) ವೆಬ್‌ಸೈಟ್: www.evoting.nsdl.com ನಲ್ಲಿ ಸೂಚನೆ ಲಭ್ಯವಿರುತ್ತದೆ.

ಕಟ್–ಆಫ್ ದಿನಾಂಕ ಅಂದರೆ, ಶುಕ್ರವಾರ, ಅಕ್ಟೋಬರ್ 17, 2025ರಂತೆ ಡಿಪಾಸಿಟರೀಸ್ (ಅಂದರೆ) ಎನ್‌ಎಸ್‌ಡಿಎಲ್ / ಸಿಡಿಎಸ್‌ಎಲ್‌ನಿಂದ ಸ್ವೀಕರಿಸಿದ ಸದಸ್ಯರ ನೋಂದಣಿ/ ಲಾಭದಾಯಕ ಮಾಲೀಕರ ಪಟ್ಟಿಯಲ್ಲಿರುವ ಹೆಸರುಗಳಿಗೆ ಕಂಪೆನಿಯ ಸದಸ್ಯರು ಅಂಚೆ ಮತಪತ್ರದ ಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ನಿರ್ಣಯಕ್ಕೆ ಸಂಬಂಧಿಸಿದಂತೆ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಸದಸ್ಯರು ತಮ್ಮ ಮತಗಳನ್ನು ವಿದ್ಯುನ್ಮಾನವಾಗಿ ಚಲಾಯಿಸಲು ಅನುಕೂಲವಾಗುವಂತೆ ಸದೂರ ವಿ–ಮತದಾನವನ್ನು ಸುಗಮಗೊಳಿಸಲು ಕಂಪೆನಿಯು ಎನ್‌ಎಸ್‌ಡಿಎಲ್‌ರವರನ್ನು ನೇಮಿಸಿದೆ. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವವರು ಅಥವಾ ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ಸೇರಿದಂತೆ ಸದಸ್ಯರು ಅಕ್ಟೋಬರ್ 17, 2025ರ ಅಂಚೆ ಮತಪತ್ರ ಸೂಚನೆಯಲ್ಲಿ ಉಲ್ಲೇಖಿಸಲಾದ ಸೂಚನೆಗಳನ್ನು ಅನುಸರಿಸುವ ಮೂಲಕ ತಮ್ಮ ಮತಗಳನ್ನು ಚಲಾಯಿಸಬಹುದು.

ಸದೂರ ವಿ–ಮತದಾನದ ಅವಧಿಯು ಶುಕ್ರವಾರ, ಅಕ್ಟೋಬರ್ 24, 2025ರಂದು ಬೆಳಿಗ್ಗೆ 9.00 ಗಂಟೆಗೆ (ಐಎಸ್‌ಟಿ) ಪ್ರಾರಂಭವಾಗುವುದು ಮತ್ತು ಶನಿವಾರ, ನವೆಂಬರ್ 22, 2025ರಂದು ಸಂಜೆ 5.00 ಗಂಟೆಗೆ (ಐಎಸ್‌ಟಿ) ಮುಕ್ತಾಯಗೊಳ್ಳುವುದು. ಸದೂರ ವಿ–ಮತದಾನವನ್ನು ತಿಳಿಸಿದ ದಿನಾಂಕ ಮತ್ತು ಸಮಯದ ನಂತರ ಅನುಮತಿಸಲಾಗುವುದಿಲ್ಲ. ಮತದಾನಕ್ಕಾಗಿ ಸದೂರ ವಿ–ಮತದಾನ ಮಾಡ್ಯೂಲ್ ಅನ್ನು ನಂತರ ನಿಷ್ಕ್ರಿಯಗೊಳಿಸಲಾಗುವುದು. ಒಮ್ಮೆ ಠರಾವಿನ ಮೇಲೆ ಮತವನ್ನು ಸದಸ್ಯರು ಚಲಾಯಿಸಿದರೆ, ತದನಂತರ ಅದನ್ನು ಬದಲಾಯಿಸಲು ಸದಸ್ಯರಿಗೆ ಅನುಮತಿಸಲಾಗುವುದಿಲ್ಲ. ಸದಸ್ಯರ ಮತದಾನದ ಹಕ್ಕುಗಳು ಕಟ್–ಆಫ್ ದಿನಾಂಕದಂದು ಅಂದರೆ ಶುಕ್ರವಾರ, ಅಕ್ಟೋಬರ್ 17, 2025ರಂದು ಕಂಪೆನಿಯ ಒಟ್ಟು ಪಾವತಿಸಿದ ಈಕ್ವಿಟಿ ಷೇರು ಬಂಡವಾಳದಲ್ಲಿನ ಅವರ ಷೇರುಗಳಿಗೆ ಅನುಗುಣವಾಗಿರುತ್ತವೆ.

ಮಂಡಳಿಯು ಅಂಚೆ ಮತದಾನ ಪ್ರಕ್ರಿಯೆಯನ್ನು ನ್ಯಾಯಬದ್ಧ ಹಾಗೂ ಪಾರದರ್ಶಕವಾಗಿ ನಡೆಸಲು ಶ್ರೀ ವಿ. ಶ್ರೀಧರನ್ (ಎಫ್‌ಸಿಎಸ್ ಸಂಖ್ಯೆ 2347; ಸಿಪಿ ಸಂಖ್ಯೆ 833) ಅಥವಾ ಅವರ ಅನುಪಸ್ಥಿತಿಯಲ್ಲಿ, ಮೆ॥ ವಿ ಶ್ರೀಧರನ್ ಅಂಡ್ ಅಸೋಸಿಯೇಟ್ಸ್, ಪ್ರಾಕ್ಟೀಸಿಂಗ್ ಕಂಪೆನಿ ಕಾರ್ಯದರ್ಶಿಗಳಾದ ಶ್ರೀ ಪ್ರದೀಪ್ ಬಿ ಕುಲಕರ್ಣಿ (ಎಫ್‌ಸಿಎಸ್ ಸಂಖ್ಯೆ 7260; ಸಿಪಿ ಸಂಖ್ಯೆ 7835) ಅವರನ್ನು ಪರಿಶೀಲಕರನ್ನಾಗಿ (ಸ್ಕ್ರುಟಿನೈಜರ್) ನೇಮಿಸಿದೆ.

ಅಂಚೆ ಮತಪತ್ರದ ಫಲಿತಾಂಶವನ್ನು ವಿ–ಮತದಾನ ಅವಧಿಯು ಮುಗಿದ 2 (ಎರಡು) ಕೆಲಸದ ದಿನಗಳಲ್ಲಿ ಪ್ರಕಟಿಸಲಾಗುವುದು ಮತ್ತು ಪರಿಶೀಲಕರ ವರದಿಯೊಂದಿಗೆ ಕಂಪೆನಿಯ ನೋಂದಾಯಿತ ಕಛೇರಿಯಲ್ಲಿ ಪ್ರಕಟಿಸಲಾಗುವುದು, ಸ್ಟಾಕ್‌ಎಕ್ಸ್‌ಚೇಂಜ್‌ಗಳಿಗೆ ತಿಳಿಸಲಾಗುವುದು ಮತ್ತು ಕಂಪೆನಿಯ ವೆಬ್‌ಸೈಟ್ www.tejasnetworks.com ನಲ್ಲಿಯೂ ಸಹ ಅಪ್‌ಲೋಡ್ ಮಾಡಲಾಗುವುದು.

ವಿ–ಮತದಾನಕ್ಕೆ ಸಂಬಂಧಿಸಿದಂತೆ, ಯಾವುದೇ ಪ್ರಶ್ನೆಗಳು ಅಥವಾ ಸಮಸ್ಯೆಗಳು ಅಥವಾ ತೊಂದರೆಗಳಿದ್ದಲ್ಲಿ, ಸದಸ್ಯರು www.evoting.nsdl.comನ ಹೆಲ್ಪ್ / ಎಫ್‌ಎಕ್ಯೂ ವಿಭಾಗದಲ್ಲಿ ಅಥವಾ ಟೋಲ್ ಫ್ರೀ ಸಂಖ್ಯೆ: 1800–1020–990 / 1800–224–430ಗೆ ಕರೆ ಮಾಡಬಹುದು ಅಥವಾ evoting@nsdl.co.in ನಲ್ಲಿ ವಿನಂತಿಯನ್ನು ಕಳುಹಿಸಬಹುದು ಅಥವಾ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್‌ನ ಉಪ ವ್ಯವಸ್ಥಾಪಕರಾದ ಫಲ್ಗುಣಿ ಚಕ್ರವರ್ತಿರವರನ್ನು FalguniC@nsdl.com ಅಥವಾ ದೂರವಾಣಿ ಸಂಖ್ಯೆ: +91–22–2499 4545ರ ಮೂಲಕ ಸಂಪರ್ಕಿಸಬಹುದು. ಪರ್ಯಾಯವಾಗಿ, ಸದಸ್ಯರು ಕಂಪೆನಿಯ ಕಂಪೆನಿ ಕಾರ್ಯದರ್ಶಿಗೆ corporate@tejasnetworks.com ನಲ್ಲಿ ಬರೆಯಬಹುದು ಅಥವಾ ದೂರವಾಣಿ ಸಂಖ್ಯೆ: +91–80–41876400 ಮೂಲಕ ಸಂಪರ್ಕಿಸಬಹುದು.

ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/–
ಅನಂತ ಮೂರ್ತಿ ಎನ್
ಕಂಪೆನಿ ಕಾರ್ಯದರ್ಶಿ & ಕಂಪ್ಲೈಯನ್ಸ್ ಅಧಿಕಾರಿ
ಐಸಿಎಸ್‌ಐ ಸದಸ್ಯತ್ವ ಸಂಖ್ಯೆ: ಎ–17134

ಸ್ಥಳ : ಬೆಂಗಳೂರು
ದಿನಾಂಕ : ಅಕ್ಟೋಬರ್ 20, 2025

ಬೆಲೆ ಏರಿಕೆ ನಡುವೆ ಹಬ್ಬಕ್ಕೆ ಖರೀದಿ ಭರಾಟೆ | ಕೆ.ಆರ್ ಮಾರುಕಟ್ಟೆಯಲ್ಲಿ ಟ್ರಾಫಿಕ್ ಜಾಮ್

# ಹಬ್ಬದ ಖರೀದಿಗೆ ಮುಗಿಬಿದ್ದ ಜನ



ಕೆ.ಆರ್.ಮಾರುಕಟ್ಟೆಯಲ್ಲಿ ಖರೀದಿಗಾಗಿ ಮುಗಿಬಿದ್ದ ಜನ.

**ಬೆಂಗಳೂರು:** ನಗರದಲ್ಲಿ ಹಬ್ಬದ ಆಚರಣೆಗಾಗಿ ಕೆ.ಆರ್ ಮಾರುಕಟ್ಟೆಯಲ್ಲಿ ಹೂ ಹಣ್ಣು ಹಾಗೂ ಅಗತ್ಯ ವಸ್ತುಗಳ ಖರೀದಿಗೆ ಜನ ಮುಗಿಬಿದ್ದಿದ್ದು, ಹೂ ಹಣ್ಣು ಹಾಗೂ ಅಗತ್ಯ ವಸ್ತುಗಳ ಖರೀದಿಯಲ್ಲಿ ತೊಡಗಿದ್ದರು.

ಕೆ.ಆರ್ ಮಾರ್ಕೆಟ್‌ನಲ್ಲಿ ಭಾರೀ ಸಂಖ್ಯೆಯಲ್ಲಿ ಗ್ರಾಹಕರು ಸೇರಿ ಹಬ್ಬದ ಆಚರಣೆಗಾಗಿ ವಿವಿಧ ಬಗೆಯ ಹೂ, ಹಣ್ಣುಗಳ ಖರೀದಿಯಲ್ಲಿ ಮುಳುಗಿದ್ದರು. ಅವೆನ್ಯೂ ರಸ್ತೆ ಸಂಪರ್ಕಿಸುವ ರಸ್ತೆ ಸಂಪೂರ್ಣ ಜನಮಯವಾಗಿತ್ತು. ಭಾರೀ ಜನಸಂಖ್ಯೆ ಹಿನ್ನೆಲೆ ಕೆಆರ್ ಮಾರ್ಕೆಟ್, ಹೂವಿನ ಮಾರ್ಕೆಟ್, ಅವೆನ್ಯೂ ರಸ್ತೆ ಸುತ್ತ ಟ್ರಾಫಿಕ್ ಜಾಮ್ ಉಂಟಾಗಿತ್ತು. ಅಲ್ಲದೇ ಕೆ.ಆರ್.ಮಾರ್ಕೆಟ್ ಮೇಲ್ಸೇತುವೆ ಮೇಲೂ ಕಿ.ಮೀ.ಗಟ್ಟಲೇ ಪಾರ್ಕಿಂಗ್‌ಗೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಸತತ ಮಳೆ ಹಿನ್ನೆಲೆ ಹೂಗಳ ಬೆಲೆ ಏರಿಕೆಯಾಗಿದ್ದರೂ ದೀಪಾವಳಿ ಹಬ್ಬದ ಹಿನ್ನೆಲೆ ಕನಕಾಂಬರ, ಮಲ್ಲಿಗೆ, ಸೇವಂತಿಗೆ, ಸುಗಂಧರಾಜ, ಚೆಂಡು ಹೂಗಳ ಖರೀದಿ ಜೋರಾಗಿತ್ತು.

### ಯಾವ ಹೂವಿಗೆ ಎಷ್ಟು ದರ?

| | |
| --- | --- |
| ಕನಕಾಂಬರ | ₹ 1,300-1,600 |
| ಮಲ್ಲಿಗೆ, ಮಳ್ಳೆ ಹೂವು | ₹ 700-900 |
| ಕಾಕಡ ಹೂವು | ₹ 700-800 |
| ಸೇವಂತಿಗೆ | ₹ 800 |
| ಗುಲಾಬಿ | ₹ 500 |
| ಕಣಗಲೆ | ₹ 500 |
| ಸುಗಂಧರಾಜ | ₹ 500 |
| ತಾವರೆ ಹೂವು (ಜೋಡಿ) | ₹150 |
| ಬಾಳೆಕಂದು | ₹ 150 ರು. |

ಅಪಘಾತ ಪ್ರಕರಣ ಸಂಬಂಧ ವಿಮಾ ಕಂಪನಿ ಮೇಲ್ಮನವಿ ಪುರಸ್ಕರಿಸಿದ ಹೈಕೋರ್ಟ್

# ಹೆಲ್ಮೆಟ್ ಧರಿಸದಿದ್ದಕ್ಕೆ 7.85 ಲಕ್ಷ ರು. ಪರಿಹಾರ ಕಟ್

**ಬೆಂಗಳೂರು:** ಅಪಘಾತ ಪ್ರಕರಣದಲ್ಲಿ ಮೃತಪಟ್ಟ ಬೈಕ್ ಸವಾರನೊಬ್ಬ ಹೆಲ್ಮೆಟ್ ಧರಿಸದ ಕಾರಣ ಪರಿಗಣಿಸಿ ಪರಿಹಾರ ಮೊತ್ತದಲ್ಲಿ ಏಳೂವರೆ ಲಕ್ಷ ರು. ಕಡಿತಗೊಳಿಸಿ ಹೈಕೋರ್ಟ್ ಆದೇಶಿಸಿದೆ.



ಹೆಲ್ಮೆಟ್ ಧರಿಸದೆ ಇರುವುದು ಬೈಕ್ ಸವಾರನ ನಿರ್ಲಕ್ಷ್ಯವಾಗಿದೆ ಎಂದು ತೀರ್ಮಾನಿಸಿದ ಹೈಕೋರ್ಟ್, ನಿಗದಿಪಡಿಸಿದ ಒಟ್ಟು 19,64,400 ರು. ಪರಿಹಾರದಲ್ಲಿ ನಿರ್ಲಕ್ಷ್ಯದ ಭಾಗವಾಗಿ ಶೇ.40ರಷ್ಟು ಹಣ ಅಂದರೆ 7,85,760 ರು. ಕಡಿತಗೊಳಿಸಿದೆ. ಅಪಘಾತದಿಂದಾಗಿ 2019ರಲ್ಲಿ ಮೃತಪಟ್ಟ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಚಿಕ್ಕಂದವಾಡಿ ಗ್ರಾಮದ ನಿವಾಸಿ ಅವಿನಾಶ್‌ನ (23) ಕುಟುಂಬದವರಿಗೆ ಒಟ್ಟು 18,03,000 ರು. ಪರಿಹಾರ ನಿಗದಿಪಡಿಸಿ ಮೋಟಾರು ವಾಹನ ಅಪಘಾತ ಪರಿಹಾರ ಕ್ಲೇಮು ನ್ಯಾಯಾಧಿಕರಣ (ಎಂಎಟಿಸಿ) ಆದೇಶಿಸಿತ್ತು. ಈ ಪರಿಹಾರ ಪ್ರಮಾಣ ಹೆಚ್ಚಿದೆ ಎಂದು ಆಕ್ಷೇಪಿಸಿ ಅಘಾತಕ್ಕೆ ಕಾರಣವಾಗಿದ್ದ ಟ್ರ್ಯಾಕ್ಟರ್‌ವೊಂದಕ್ಕೆ ವಿಮಾ ಪಾಲಿಸಿ ನೀಡಿದ್ದ ವಿಮಾ ಕಂಪನಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಈ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದ ನ್ಯಾಯ ಮೂರ್ತಿ ಡಿ.ಕೆ.ಸಿಂಗ್ ಅವರ ನೇತೃತ್ವದ ವಿಭಾಗೀಯ ಪೀಠ, ಪರಿಹಾರ ಮೊತ್ತ ಕಡಿತಗೊಳಿಸಿ ಆದೇಶಿಸಿದೆ. ಪ್ರಕರಣದಲ್ಲಿ ಅಪಘಾತ ಸಂಭವಿಸಿದ ವೇಳೆ ದ್ವಿಚಕ್ರ ಸವಾರನಾಗಿದ್ದ ಮೃತ ಅವಿನಾಶ್ ಹೆಲ್ಮೆಟ್ ಧರಿಸಿರಲಿಲ್ಲ. ದಾಖಲೆಗಳ ಪ್ರಕಾರ, ಬೈಕ್‌ನಲ್ಲಿ ಅವಿನಾಶ್ ವೇಗದಿಂದ ಮತ್ತು ನಿರ್ಲಕ್ಷ್ಯದಿಂದ ಬಂದು ಟ್ರೈಲರ್ ಹಿಂಬದಿಗೆ ಡಿಕ್ಕಿ ಹೊಡೆದಿದ್ದಾನೆ. ಇದರಿಂದ ಅಪಘಾತದಲ್ಲಿ ಆತನ ನಿರ್ಲಕ್ಷ್ಯ ಪ್ರಮಾಣವು ಶೇ.40ರಷ್ಟಿದೆ. ಟ್ರಾಕ್ಟರ್ ಚಾಲಕನ ನಿರ್ಲಕ್ಷ್ಯ ಶೇ.60ರಷ್ಟಿದೆ ಎಂಬುದಾಗಿ ಪೀಠ ತೀರ್ಮಾನಿಸಿತು. ಅಲ್ಲದೆ, ಮೃತಪಟ್ಟಾಗ ಅವಿನಾಶ್ ವಯಸ್ಸು, ಪಡೆಯುತ್ತಿದ್ದ ಸಂಬಳ, ಅವರ ಕುಟುಂಬದವರು ಅನುಭವಿಸಿದ ಅವಲಂಬನೆ ನಷ್ಟ/ನೋವು, ಅಂತ್ಯಕ್ರಿಯೆ ಖರ್ಚು ಮತ್ತು ಆತ ಭವಿಷ್ಯದಲ್ಲಿ ಗಳಿಸಬಹುದಾಗಿದ್ದ ಸಂಭಾವ್ಯ ಆದಾಯವನ್ನು ಲೆಕ್ಕಹಾಕಿದ ಪೀಠವು ಒಟ್ಟು 19,64,400 ರು. ಪರಿಹಾರ ಪಡೆಯಲು ಅನಿನಾಶ್ ಕುಟುಂಬದವರು ಅರ್ಹರಾಗಿದ್ದಾರೆ. ಆದರೆ, ಅಪಘಾತ ನಡೆದಾಗ ಮೃತ ಹೆಲ್ಮೆಟ್ ಧರಿಸದ್ದಕ್ಕೆ ಶೇ.40ರಷ್ಟು ಅಂದರೆ ಒಟ್ಟು 7,85,760 ರು. ಅನ್ನು ನಿರ್ಲಕ್ಷ್ಯದ ಭಾಗವಾಗಿ ನಿಗದಿಯಾದ ಪರಿಹಾರ ಮೊತ್ತದಲ್ಲಿ ಕಡಿತಗೊಳಿಸಲಾಗುತ್ತಿದೆ ಎಂದು ತಿಳಿಸಿತು. ಜತೆಗೆ, ಉಳಿದ 11,78,640 ರು.ಅನ್ನು ಶೇ.6ರಷ್ಟು ವಾರ್ಷಿಕ ಬಡ್ಡಿದರ ದೊಂದಿಗೆ ಆರು ವಾರದಲ್ಲಿ ಮೃತನ ಕುಟುಂಬದವರಿಗೆ ಪಾವತಿಸುವಂತೆ ವಿಮಾ ಕಂಪನಿಗೆ ಆದೇಶಿಸಿದೆ.

### ಪ್ರಕರಣವೇನು?

**ಯುವಕ ಅವಿನಾಶ್ ರಾತ್ರಿ 8.50 ಸಮಯದಲ್ಲಿ ಹೊಳಲ್ಕೆರೆ ತಾಲೂಕಿನ ಹಿರೇಗುಂಟನೂರು ಗ್ರಾಮದಿಂದ ಅಡನೂರು ಗ್ರಾಮಕ್ಕೆ ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸುತ್ತಿದ್ದ. ಚಿಕ್ಕಜಾಜೂರು ಗ್ರಾಮದ ಬಳಿ ಮುಂದೆ ಸಾಗುತ್ತಿದ್ದ ಟ್ರ್ಯಾಕ್ಟರ್ ಮತ್ತು ಟ್ರೈಲರ್‌ನ್ನು ಚಾಲಕ ಯಾವುದೇ ಮುನ್ಸೂಚನೆ ನೀಡದೆ ದಿಢೀರ್ ಬ್ರೇಕ್ ಹಾಕಿ ನಿಲ್ಲಿಸಿದ್ದ. ಇದರಿಂದ ಟ್ರೈಲರ್ ಹಿಂಬದಿಗೆ ಅವಿನಾಶ್ ಬೈಕ್ ಡಿಕ್ಕಿ ಹೊಡೆದಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಅವಿನಾಶ್, ಆಸ್ಪತ್ರೆಗೆ ಸಾಗಿಸುತ್ತಿದ್ದಾಗ ಮಾರ್ಗಮಧ್ಯೆ ಸಾವನ್ನಪ್ಪಿದ್ದ. ಪರಿಹಾರಿ ಕೋರಿ ಮೃತನ ತಂದೆ ಬಸರಾಜಪ್ಪ, ಎಂಎಸಿಟಿಗೆ ಅರ್ಜಿ ಸಲ್ಲಿಸಿದ್ದರು. ಅದರ ವಿಚಾರಣೆ ನಡೆಸಿದ್ದ ಹೊಳಲ್ಕೆರೆಯ ಎಂಎಸಿಟಿ (ನ್ಯಾಯಾಧಿಕರಣ) ಮೃತ ಅವಿನಾಶ್ ಕುಟುಂಬದವರಿಗೆ ಶೇ.6ರಷ್ಟು ವಾರ್ಷಿಕ ಬಡ್ಡಿದರದಲ್ಲಿ ಒಟ್ಟು 18,03,000 ರು. ಪರಿಹಾರ ಪಾವತಿಸುವಂತೆ ಟ್ರ್ಯಾಕ್ಟರ್‌ಗೆ ವಿಮಾ ಪಾಲಿಸಿ ಒದಗಿಸಿದ್ದ ವಿಮಾ ಕಂಪನಿಗೆ ನಿರ್ದೇಶಿಸಿ 2019ರ ಡಿ.5ರಂದು ಆದೇಶಿಸಿತ್ತು.**

**ಈ ಆದೇಶ ಪ್ರಶ್ನಿಸಿ 2021ರಲ್ಲಿ ನ್ಯಾಷನಲ್ ವಿಮಾ ಕಂಪನಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಇದೇ ವೇಳೆ ಪರಿಹಾರ ಪ್ರಮಾಣ ಕಡಿಮೆಯಾಗಿದೆ ಎಂದು ಆಕ್ಷೇಪಿಸಿ ಅವಿನಾಶ್ ತಾಯಿ ಹೈಕೋರ್ಟ್‌ಗೆ ಪ್ರತ್ಯೇಕ ಮೇಲ್ಮನವಿ ಸಲ್ಲಿಸಿದ್ದರು.**